# ಪರಿಶಿಷ್ಟ ೧

ಪ್ರೊಫೆಸರ್ ಎಸ್. ಪದ್ಮಾ ನಾಭ ಜೈನಿ

ಅವರ 'ದಿ ಜೈನ ಪಾತ್ ಆಫ್ ಪ್ಯೂರಿಫಿಕೇಶನ್'

(ಪುಟ ೩೯–೪೦) ಶ್ವೇತಾಂಬರ ಮತ್ತು ದಿಗಂಬರ ಸಂಪ್ರದಾಯಗಳ ಮಧ್ಯೆ ಇವರು ಮತಭೇದಗಳು ಸಂಗ್ರಹವಾಗಿ ಮುಂದಿನಂತಿದೆ ;

೧. ಸರ್ವಜ್ಞಜಿನನು, ದಿಗಂಬರ ಸಂಪ್ರದಾಯದ ಅನುಸಾರ, ಪ್ರಾಪಂಚಿಕ ವ್ಯವಹಾರಗಳಲ್ಲಿ ತೊಡಗುವುದಿಲ್ಲ ಮತ್ತು ಸರ್ವಜ್ಞತ್ವಕ್ಕೆ ತಾತ್ತ್ವಿಕವಾಗಿ ವಿರೋಧವಾಗುವುದಾದ್ದರಿಂದ (ಭೋಜನ ಮುಂತಾದ) ದೈಹಿಕ ಕ್ರಿಯೆಗಳು ಅವನಿಗಿರುವುದಿಲ್ಲ ಅವನು ಪವಾಡರೂಪದ ದಿವ್ಯಧ್ವನಿಯ ಮೂಲಕ ಉಪದೇಶಮಾಡುತ್ತಾನೆ. ಶ್ವೇತಾಂಬರರ ಪ್ರಕಾರ ಅವನು ಸರ್ವಜ್ಞತ್ವ ಸಂಪನ್ನತೆಯ ಆನಂದವುಳ್ಳವನಾಗಿದ್ದು ಜೊತೆಗೆ ಸಾಧಾರಣ ಮನುಷ್ಯನ ಸಾಧಾರಣ ಕ್ರಿಯೆಗಳಲ್ಲಿ– ವ್ಯವಹಾರಗಳಲ್ಲಿ ತೊಡಗಿರುವನು.

೨. ದಿಗಂಬರರು, ಹೆಸರು ಹೇಳುವಂತೆ, ಬ್ರಹ್ಮಚರ್ಯ ಪಾಲನೆಗಾಗಿ, ಮುಕ್ತಿ ಸಾಧಕವಾಗಿ ನಗ್ನತೆಯನ್ನು ಅಗತ್ಯದ ವಿಧಿಯನ್ನಾಗಿ ತಿಳಿಯುತ್ತಾರೆ.ಶ್ವೇತಾಂಬರರ ಪ್ರಕಾರ ನಗ್ನತೆ ನಿರ್ಬಂಧಿತವಲ್ಲ, ಐಚ್ಛಿಕ.

೩. ಸ್ತ್ರೀಯರು ಮುಕ್ತಿ ಪಡೆಯಲು ಅಗತ್ಯವಾದ ವಜ್ರಪ್ರಾಯ ದಾರ್ಢ್ಯದ ಶರೀರ ರಚನೆ ಹೊಂದಿರುವುದಿಲ್ಲವಾದ್ದರಿಂದ ಮೋಕ್ಷ ಹೊಂದಲಾರರೆಂಬುದು ಮತ್ತು ಇಂತಹ ದಾರ್ಢ್ಯವುಳ್ಳ ಪುರುಷ ಶರೀರವನ್ನುಮುಂದಿನ ಜನ್ಮಗಳೊಂದರಲ್ಲಿ ಪಡೆದು ಮುಕ್ತಿಪಡೆಯಬುಹುದೆಂಬುದು ದಿಗಂಬರರ ಅಭಿಮತ. ಶ್ವೇತಾಂಬರರ ಪ್ರಕಾರ ಮುಕಿ ಪಡೆಯುವ ಅರ್ಹತೆಯ ದೇಹರಚನೆ ಸ್ತ್ರೀಯರಿಗೂ ಇದೆ. ಆದ್ದರಿಂದ ಅವರೂ ಮೋಕ್ಷ ಹೊಂದಬಹುದು.

ಈ ಮೇಲೆ ಹೇಳಿದವುಗಳಲ್ಲದೆ ಭಿಕ್ಷಾಚರ್ಯೆ ಮತ್ತು ಆಹಾರಸ್ವೀಕಾರ ವಿಷಯಗಳಲ್ಲಿಯೂ ಈ ಎರಡು ಸಂಪ್ರದಾಯಗಳ ಮಧ್ಯೆ ಇರುವ ವ್ಯತ್ಯಾಸ ಗಮನಾರ್ಹವಾಗಿದೆ. (ದಿಗಂಬರ ಮುನಿಗಳು ಪಾಣಿಪಾತ್ರರು ಎಂಬುದು ಪ್ರಸಿದ್ಧ ಸಂಗತಿ.)

(ಪುಟ ೧೫) ದಿಗಂಬರರು 'ಷಟ್‌ಖಂಡಾಗಮ' ಮತ್ತು 'ಕಷಾಯ ಪ್ರಾಭೃತ' ಎಂಬ ಎರಡು (ಕೆನಾನಿಕಲ್) ಆಗಮ ಕೃತಿಗಳನ್ನು ಮಾತ್ರ ಹೊಂದಿದ್ದಾರೆ. ಈ (ದಿಗಂಬರ) ಸಂಪ್ರದಾಯದವರು ಅಂಗ ಮತ್ತು ಅಂಗಬಾಹ್ಯ (ಆಗಮ) ಗ್ರಂಥಗಳು, ಕ್ರಿ. ಶ. ೨ನೇ ಶತಮಾನದಷ್ಟು ಪೂರ್ವಕಾಲಕ್ಕಾಗಲೇ 'ಪೂರ್ಣರೀತಿಯಿಂದ ನಷ್ಟವಾಗಿ ಹೋದುವು' (ಟೋಟಲಿ ಲಾಸ್ಟ್) ಎಂಬ ಅಭಿಮತವನ್ನು ನಿಷ್ಠೆಯಿಂದ ಉಳಿಸಿಕೊಂಡು ಬಂದಿದ್ದಾರೆ.

ಏನೇ ಇರಲಿ, ಅದೃಷ್ಟವಶವಾಗಿ (ಆಗಮಗಳ) ನಷ್ಟವು ಪೂರ್ಣರೀತಿಯದಾದುದಾಗಿಲ್ಲ. ದಿಗಂಬರರ, ಪ್ರಾಯಶಃ (ಆಗಮಗ್ರಂಥಗಳು ಪೂರ್ಣವಾಗಿ ನಷ್ಟವಾದುವು ಎಂಬ) ಈ ಅಭಿಮತವನ್ನು ಮೊದಲಿಗೆ, ಅವರ ಪ್ರತಿದ್ವಂದಿಗಳಾದ (ರೈವಲ್ಸ್) ಶ್ವೇತಾಂಬರರು ಉಳಿಸಿಕೊಂಡು ಬಂದ ಆಗಮ ಗ್ರಂಥಗಳ ಪ್ರಮಾಣ್ಯವನ್ನು ತಿರಸ್ಕರಿಸುವುದಕ್ಕಾಗಿ ರೂಢಿಸಿಕೊಂಡಿದ್ದಾರೆ. ಈ ರೀತಿಯಾಗಿ ತಿರಸ್ಕರಿಸುವುದರ ಕಾರಣವನ್ನು ಈ ಹಿಂದೆ ವಿವರಿಸಿದೆ. (ಈ ವಿವರಣೆ ದಿಗಂಬರ ಮತ್ತು ಶ್ವೇತಾಂಬರ ಸಂಪ್ರದಾಯಗಳ ಮಧ್ಯೆ ಇರುವ ವ್ಯತ್ಯಾಸವನ್ನು ಸೂಚಿಸುವಂತಿದೆ.) ಇದಲ್ಲದೆ ಮತ್ತೂ ಒಂದು ಸಂಭಾವ್ಯತೆಯನ್ನು ಕಾಣಬುದಾಗಿದೆ. ದಿಗಂಬರ ಸಂಪ್ರದಾಯದವರು ತಮ್ಮಲ್ಲಿದ್ದಿರಬಹುದಾದ. ಆಗಮ ಸಾಹಿತ್ಯವನ್ನು ದಕ್ಷಿಣಕ್ಕೆ ವಲಸೆ ಬಂದ ಸಮಯದಲ್ಲಿ ಮತ್ತು ಆ ಬಳಿಕ ಸ್ಥಿಕತರ ಸಂಖ್ಯಾತವಾಗಿದ್ದ ಜೈನಮುನಿ ಸಮಾಜದಿಂದ ಪ್ರತ್ಯೇಕತೆ ಹೊಂದಿದಾಗ ವಾಸ್ತವವಾಗಿ ಕಳೆದುಕೊಂಡಿದೆ.

ಈ ಮೇಲಿನ ವಕ್ತವ್ಯವನ್ನು ಪುಷ್ಟೀಕರಿಸುವಂತಿರುವ 'ದಿ ಜೈನ ಪಾತ್ ಆಫ್ ಪ್ಯೂರಿಫಿಕೇಶನ್'ನ ಮತ್ತೂ ಒಂದು ಪ್ರಕರಣವನ್ನು ಇಲ್ಲಿ ಹೇಳಬೇಕಾಗಿದೆ ; (ಪು. ೨೧ ರಿಂದ ೨೫)– ಶ್ವೇತಾಂಬರ ಆಗಮಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ಪಡೆದಿರುವ ಭಗವತೀ ಸೂತ್ರ–ವ್ಯಾಖ್ಯಾ ಪ್ರಜ್ಞಪ್ತಿ ಅಂಗ ಶ್ರುತಗ್ರಂಥದಲ್ಲಿ ಭಗವಾನ್  ಮಹಾವೀರ ಮತ್ತು ಆಜೀವಕ ಪಂಥದ ಮಕ್ಖಲಿ ಗೋಸಾಲರ ಸಾಹಚರ್ಯ ಮತ್ತು ವಿರಸ ಪ್ರಸಂಗಗಳ ಕಥನವಿದೆ ;"ಭ. ಮಹಾವೀರನ ಅತಿಮಾನುಷ (ಪವಾಡ)

ಶಕ್ತಿಯ ಬಗ್ಗೆ ಕೇಳಿ ತಿಳೀದ ಗೋಶಾಲನು ಅವನ ಬಳಿ ಹೋಗಿ ತನ್ನನ್ನು ಶಿಷ್ಯನನ್ನಾಗಿ ಸ್ವಿಕರಿಸಬೇಕೆಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಸಮ್ಮತಿಸಿದ ಭ. ಮಹಾವೀರನೊಡನೆ ಆರು ವರ್ಷಗಳ ಕಾಲ ಇರುತ್ತಾನೆ. ಒಮ್ಮೆ ಬ್ರಾಹ್ಮಣ ತಪಸ್ವಿಯೊಬ್ಬನನ್ನು ಗೋಶಾಲನು ಅವಹೇಳನ ಮಾಡುತ್ತಾನೆ. ಇದರಿಂದ ಕೋಪಗೊಂಡ ಆ ತಪಸ್ವಿಯು ಯೋಗಸಾಧನೆಯಿಂದ ತನ್ನಲ್ಲಿ ಸಂಚಿತವಾಗಿದ್ದ ಮಾರಕವಾದ ತೇಜಸ್ಸನ್ನು ಗೋಶಾಲನತ್ತ ಪ್ರಯೋಗಿಸುತ್ತಾನೆ. ಆಗ ಭ. ಮಹಾವೀರನು, ಅದರ ಪ್ರತಿರೋಧಕವಾದ ತನ್ನ ಶೀತಲ ಶಕ್ತಿಯಿಂದ ಅದನ್ನು ನಿವಾರಣೆ ಮಾಡುತ್ತಾನೆ. ಈ ಅದ್ಭುತ ಶಕ್ತಿಯನ್ನು ಪಡೆಯುವ ಮಾರ್ಗವನ್ನು ತೋರಬೇಕೆಂದು ಗೋಶಾಲನು ಬೇಡುತ್ತಾನೆ. ಭ. ಮಹಾವೀರನು ಅವನಿಗೆ ಆರು ತಿಂಗಳ ಕಾಲ ನಡೆಸಬೇಕಾದ ಸಾಧನೆಯ ಪ್ರಕಾರವನ್ನು ತಿಳೀಸುತ್ತಾನೆ. ಅದರಂತೆ ಸಾಧನೆ ಮಾಡಿ ಸಫಲನಾದ ಗೋಶಾಲನು ತನ್ನನ್ನು 'ಜಿನ' ನೆಂದು ಘೋಷಿಸಿಕೊಳ್ಳುತ್ತಾನೆ. ಭ. ಮಹಾವೀರನು ಕೇವಲಜ್ಞಾನ ಸಂಪನ್ನನಾದ ಅನಂತರ ತನ್ನೊಡನೆ ಹಿಂದೆ ಗೋಶಾಲನಿಗಿದ್ದ ಸಂಬಂಧವನ್ನು ಪ್ರಕಾಶಪಡಿಸಿ ಗೋಶಾಲನ 'ಜಿನತ್ವ'ದ ಕೃತ್ರಿಮ ಸ್ವರೂಪವನ್ನು ಬಹಿರಂಗ ಪಡಿಸಿದನು. ಇದರಿಂದ ಕ್ರುದ್ಧನಾದ ಗೋಶಾಲನು ಭ. ಮಹಾವೀರನನ್ನು ತೀವ್ರತರವಾಗಿ ನಿಂದಿಸಿದನು. ಇವನ ಈ ನಿಂದನೆಯನ್ನು ವಿರೋಧಿಸಿದ ಭ. ಮಹಾವೀರನ್ ಇಬ್ಬರು ಶಿಷ್ಯರನ್ನು ಗೋಶಾಲನು ತನ್ನಲ್ಲಿ ಸಂಚಿತವಿದ್ದ ತೇಜೋಲೇಶ್ಯಾ ಶಕ್ತಿಯಿಂದ ಸುಟ್ಟು ಭಸ್ಮ ಮಾಡಿದನು. ಇದಾದ ಮೇಲೆ ಈ ತನ್ನ ಶಕ್ತಿಯನ್ನು ಭ. ಮಹಾವೀರನ ಮೇಲೆ ಪ್ರಯೋಗಮಾಡಿ ಅದರ ಪರಿಣಾಮದಿಂದ ಆರು ತಿಂಗಳುಗಳಲ್ಲಿ ಜ್ವರದಿಂದ ಭ. ಮಹಾವೀರನು ಮರಣ ಹೊಂದುವನೆಂಬುದಾಗಿಯೂ ಘೋಷಿಸಿದನು . ಆದರೆ ಭ. ಮಹಾವೀರನ ಅತಿಶಯ ಮಹಿಮೆ ಮತ್ತು ಪವಿತ್ರತೆಯು ಅವನಿಗೆ ರಕ್ಷಣವಾಯಿತು. ವ್ಯಾಧಿಗ್ರಸ್ತನಾದರೂ ಅವನು ಅದನ್ನು ನಿವಾರಿಸಿಕೊಳ್ಳಲು ಸಮರ್ಥನಾಗಿದ್ದನು. ಗೋಶಾಲನ ಬಗ್ಗೆಯಾದರೋ, ಅವನ ಪ್ರಯೋಗದ ಕೆಟ್ಟ ಶಕ್ತಿಯು ತನ್ನ ಮೂಲಸ್ಥಾನಕ್ಕೇ ಹಿಂದಿರುಗಿತು, ಬುದ್ಧಿ ಭ್ರಮಣೆ ಹೊಂದಿದ ಅವನು ಬೇಗನೆ ಹಾಲಾಹಲಾ(ಕುಂಭಕಾರ)ಳ ಕಾರ್ಯಗಾರದಲ್ಲಿ ಮರಣ ಹೊಂದಿದನು (ಅ.ಟಿ. ೫೬) ವ್ಯಾಧಿ ನಿವಾರಣೆ ಮಾಡಿಕೊಂಡ ಪ್ರಸಂಗದ ಸಂಗತಿಗಳು ವಿವಾದಗ್ರಸ್ತವಾಗಿವೆ. ಪ್ರಥಮತಃ ಜಿನನು ತನ್ನ ವ್ಯಾಧಿಯನ್ನು ಗುಣಪಡಿಸಿಕೊಳ್ಳಲು ಇಷ್ಟವುಳ್ಳವ

ನಾಗುವಷ್ಟು ರೀತಿಯಿಂದ ತನ್ನ ಬದುಕಿನ ವ್ಯಾಮೋಹ ಹೊಂದಿದ್ದನೆಂಬುದಾಗಿ ಶ್ವೇತಾಂಬರರೂ ಕೂಡ ಸೂಚನೆ ಕೊಡುವುದಿಲ್ಲ. ಇದು ಹೇಗಾದರಿರಲಿ; ಸೀಹನೆಂಬ ಹೆಸರಿನ ಒಬ್ಬ ಸಾಧುವು, ತನ್ನ ಸ್ವಾಮಿಯ ವ್ಯಾಧಿಯು ಅವನಿಗೆ ಮಾರಕವಾಗಬಹುದೆಂದು ತೀವ್ರವಾಗಿ ಕಳವಳಗೊಂಡನು. ಅವನ ಸಂಕಟದ ಶಮನಕ್ಕಾಗಿ ಮಹಾವೀರನು, ಗೋಶಾಲನಿಂದಾದ ಪ್ರಯೋಗದ ಅಪಾಯಕಾರಿ ಪರಿಣಾಮಗಳನ್ನು ಪರಿಹರಿಸಲು ಸಮರ್ಥವಾದ ಒಂದು ಔಷಧವಸ್ತುವನ್ನು ದೊರಕಿಸಿಕೊಳ್ಳಲು ಅವನನ್ನು ಕಳುಹಿಸಿದನು. ಈ ಔಷಧವಸ್ತುವಿನ ಹೆಸರು 'ಕುಕ್ಕುಟ ಮಾಂಸ', ಇದು ಸಾಧಾರಣವಾಗಿ 'ಕೋಳಿಯ ಮಾಂಸ' ವನ್ನು ಸೂಚಿಸುತ್ತದೆ. ಆದರೆ ಒಬ್ಬನು, ಸಾಮಾನ್ಯನಾದ ಸಾಧುವೇ ಆಗಿರಲಿ, ಅವನು ಮಾಂಸ ಭಕ್ಷಕನೆಂಬುದನ್ನು ಯಾವ ಜೈನನೂ ಒಪ್ಪಿಕೊಳ್ಳಲಾರ. ಹೀಗಿರುವಲ್ಲಿ, ಪರಿಸ್ಥಿತಿಯ ಲಕ್ಷ್ಯವಿಲ್ಲದೆ, ಜಿನನೊಬ್ಬನು ಹಾಗೆ ಮಾಡಿರುವನೆಂಬುದಾದ ಸೂಚನೆಯು, ಅತ್ಯಂತ ಹೀನಾಯವಾದದ್ದೆನಿಸುವುದು. ಆದ್ದರಿಂದ ಶ್ವೇತಾಂಬರ ವ್ಯಾಖ್ಯಾನಕಾರರು ಈ 'ಕುಕ್ಕುಟ ಮಾಂಸ' ಎಂಬ ಪದವು ಮಾಂಸದ ಸೂಚಕವಾಗಿರದೆ ಬೀಜಪೂರಕ ಕಟಾಹ ಎಂಬ ಹಣ್ಣಿನ ತಿರುಳಿನ ಸೂಚಕವಾಗಿದೆಯೆಂದು ಕಾಣಿಸಲು ಅಪಾರ ಶ್ರಮ ತೆಗೆದುಕೊಂಡಿದ್ದಾರೆ. ಈ ಹಣ್ಣನ್ನು ಹಿಂದಿಯಲ್ಲಿ 'ಬೆಲ್ ಫಲ' ಎಂದು ಹೆಸರಿಸುತ್ತಾರೆ. ಇದನ್ನು ಮೈಯಲ್ಲಿ ನೀರಿನ ಅಂಶ ಕಡಿಮೆಯಾಗುವ (ಡಿ ಹೈಡ್ರೇಷನ್) ವ್ಯಾಧಿಗೆ ಚಿಕಿತ್ಸಕ ಔಷಧವಾಗಿ ಸಾಧಾರಣವಾಗಿ ಉಪಯೋಗಿಸಲಾಗುತ್ತದೆ. ಪ್ರಾಣಿಸೂಚಕವಾದ ಇಂತಹ ಹೆಸರುಗಳು ಆಯುರ್ವೇದದಲ್ಲಿ ಅನೇಕ ಬಾರಿ ಸಸ್ಯ (ಮೂಲಿಕೆ)ಗಳ ಸೂಚಕಗಳಾಗಿ ಪ್ರಯುಕ್ತವಾಗಿವೆ. ನಿಜವೆಂದರೆ ಬಹು ಹಿಂದಿನ ಕಾಲದಲ್ಲಿಯೇ ಈ (ಕುಕ್ಕುಟಮಾಂಸ ಎಂಬ) ಪದವನ್ನು ಮರೆಗೊಳಿಸಲು ಯತ್ನಿಸದಿದ್ದುದು ಅಥವಾ ತೆಗೆದುಹಾಕದಿದ್ದುದು ಈ ಹೇಳಿದ ಮೂಲಿಕ ಎಂಬ ಅರ್ಥವನ್ನು ಸಮರ್ಥಿಸುತ್ತದೆ. ಮೂಲಗ್ರಂಥದ ಸಮಯಕ್ಕೆ ಅತ್ಯಂತ ಹತ್ತಿರದ ಸಮಯದವರಾದ ವ್ಯಾಖ್ಯಾನಕಾರರು. ಈ ಪದದ ಅರ್ಥವನ್ನು ಕಾಲಾಂತರದಲ್ಲಿ ತಪ್ಪಾಗಿ ಅರ್ಥೈಸುವ ಸಂಭವ ವಿಲ್ಲೆಂದು ಭಾವಿಸಿದ್ದಾರೆ. ಹಾಗೆ ಹೇಳುವುದಾದರೆ; ಧರ್ಮಾನಂದ ಕೊಸಾಂಬಿಯವರು ತಮ್ಮ 'ಭಗವಾನ್ ಬುದ್ಧ' (ಮರಾಠಿ) ಕೃತಿಯನ್ನು ೧೯೪೧ರಲ್ಲಿ ಪ್ರಕಟಪಡಿಸುವ ವರೆಗೆ, ಯಾರೇ ಆಗಲಿ (

ಇಂಡಿಯಾದಲ್ಲಿ) ಕುಕ್ಕುಟ ಮಾಂಸವನ್ನು 'ಮಾಂಸ' ಎಂಬ ಅರ್ಥದಲ್ಲಿ ಗ್ರಹಿಸಬಹುದಾದ ಸಂಭವನೀಯತೆಯನ್ನು ಸೂಚಿಸಿರಲಿಲ್ಲ.

ಭಗವತೀಸೂತ್ರದಲ್ಲಿ ದೊರಕುವ ಈ ಎರಡು ಸನ್ನಿವೇಶಗಳೂ ದಿಗಂಬರ ಸಂಪ್ರದಾಯಕ್ಕೆ ತಿಳಿಯದಂತಹುವಾಗಿದ್ದು ನಿರಾಕೃತವಾಗಿವೆ. ಪರಿಶುದ್ಧತೆಯ ಪರಿಪೂರ್ಣತೆ ಹೊಂದಿದ ಜಿನನು ಲೌಕಿಕ ವಿವಾದಗಲ್ಲಿ ತೊಡಗುವುದೆಂಬ ಯಾವುದೇ ಅಭಿಮತವನ್ನಾಗಲಿ ತಾತ್ತ್ವಿಕ ನಿಲುವಿನ ಆಧಾರದಿಂದ, ಅವರು (ದಿಗಂಬರರು) ಗೋಶಾಲನಿಗೆ ಸಂಬಂಧಿಸಿದ ಸಂಗತಿಗಳನ್ನು ಮರೆಮಾಚಿರುವರೆಂಬುದು ಸ್ಪಷ್ಟವಿದೆಯಾದರೆ, ಕೇವಲ ಜ್ಞಾನಸಂಪನ್ನನಾಗುವುದರ ಮುಂಚಿನ ಕಾಲದಲ್ಲಿ ಮಹಾವೀರನೊಡನೆ, ಮಕ್ಖಲಿ ಗೋಶಾಲನು ಹೊಂದಿದ್ದ ಪ್ರಮುಖವಾದ ಸಂಬಂಧವು ಅವರಿಗೆ (ದಿಗಂಬರರಿಗೆ) ತಿಳಿದೇ ಇಲ್ಲವೆಂಬುದರ ವಿವರಣೆ ಸುಲಭಸಾಧ್ಯವಲ್ಲ. ಬಹುಶಃ ಭವಿಷ್ಯದಲ್ಲಿ ಜಿನನಾಗಿ ಲಿರುವವನು ಪರಧರ್ಮೀಯನೊಡನೆ ನಿಕಟವರ್ತಿಯಾದ ಸಂಬಂಧ ಹೊಂದಿರುವುದು ಅವರಿಗೆ (ದಿಗಂಬರರಿಗೆ) ರುಚಿಸದ ಸಂಗತಿಯಾಗಿದೆ.

ದಿಗಂಬರ ಸಂಪ್ರದಾಯಕ್ಕೆ ಆಜೀವಕರೇ ಅತ್ಯಂತ ಪ್ರಾಚೀನರು ಎಂಬುದು ಶ್ರೀ ಹೋಏರ್ನಲ್ ಅವರ ಅಭಿಮತವಾದರೆ ಆಜೀವಕರು ಮಧ್ಯಯುಗದಲ್ಲಿ ದಿಗಂಬರ ಪಂಥದೊಡನೆ ವಿಲೀನರಾದರೆಂಬುದು ಶ್ರೀ ಭಾಷಂ ಅವರ ಅಭಿಮತ. ಇವೆರಡರಲ್ಲಿ ಯಾವುದೊಂದೇ ಆಗಿದ್ದರೂ ಸರಿಯೇ, ದಿಗಂಬರರು ವರ್ತಮಾನದಲ್ಲಿ ಏಕತಾನ ಮತ್ತು ಸಂಪ್ರದಾಯಬದ್ಧತೆಗಳ ಸಂರಕ್ಷಣೆಗಾಗಿ ತಮ್ಮ ಧರ್ಮಪಂಥಕ್ಕೆ ಸಂಬಂಧಿಸಿದ ಪರಧರ್ಮೀಯ ಹಿನ್ನೆಲೆಯ ಭಾಗವನ್ನು ನಿರಾಕರಣೆ ಮಾಡಿದ್ದಾರೆಂಬುದು ಫಲಿತಾಂಶವಾಗಿದೆ. ಏನೇ ಇರಲಿ, ದಿಗಂಬರರಿಂದಾಗಿರುವ, ಗೋಶಾಲನಂತಹ ಪ್ರಮುಖ ವ್ಯಕ್ತಿಯ ಅತ್ಯಂತ ಗಮನಾರ್ಹ ಪರಿವರ್ಜನೆಯನ್ನು ಇಂತಹ ಊಹಾ ಪೋಹಗಳ ಆಲಂಬವಿಲ್ಲದೆಯೂ ತಿಳಿದುಕೊಳ್ಳಬಹುದು. (ಶ್ವೇತಾಂಬರರಿಂದ) ಕ್ರೋಡೀಕರಿಸಲ್ಪಟ್ಟ ಪಾಟಲೀಪುತ್ರ ಪರಿಷ್ಕರಣದ ಆಗಮದ ಕೆಲವು ಭಾಗಗಳ ಬಗ್ಗೆ ಅವರಲ್ಲಿ ( ದಿಗಂಬರರಲ್ಲಿ) ಉಂಟಾದ ಅಸಮಾಧಾನದ ಕಾರಣದಿಂದ ಅವರು ತಮ್ಮಲ್ಲಿ 'ಆಗಮ' ವೆಂಬುದೇನೂ ಉಳಿದುಕೊಳ್ಳದ ರೀತಿಯಲ್ಲಿ ( ಆ ಆಗಮದಲ್ಲಿದ್ದ) ವಿಷಯವನ್ನು ತ್ಯಜಿಸಿಬಿಟ್ಟಿದ್ದಾರೆ. ಈ ವಿವರಣೆಯು ಸಹಿತ್ಯಕ್ಕಿಂತಲೂ

ಹೆಚ್ಚಿನದಾಗಿ ಆಚರಣೆಯ ವಿಧಿವಿಧಾನದ ಮೇಲೆ ( ಅದರಲ್ಲಿಯೂ ವಿಶೇಷತಃ ನಗ್ನತೆಯ ಮೇಲೆ) ದಿಗಂಬರರು ಅತ್ಯಧಿಕವಾದ ಪ್ರಾಧಾನ್ಯತೆ ( ಒತ್ತು) ಕೊಟ್ಟಿರುವುದನ್ನು ಸಮರ್ಥಿಸುತ್ತದೆ. ಏಕೆಂದರೆ, ಪ್ರಾಚೀನ ಆಗಮದ ಅಭಾವದಲ್ಲಿ ಅಂತಿಮವಾಗಿ ಆಚಾರ ವಿಧಿ ಮಾತ್ರ ಆ (ದಿಗಂಬರ) ಪಂಥದವರ ಅಸಾಧಾರಣತೆ ಮತ್ತು ಸ್ವಕೀಯತೆಯನ್ನು ಸ್ಫುಟ ಗೊಳಿಸುವುದು (ಪು.೨೧) ಭ. ಮಹಾವೀರನು, ತನ್ನ ಹನ್ನೆರಡು ವರ್ಷಗಳ ತಪಸ್ಸಿನ ಕಾಲದಲ್ಲಿ, ಮೌನ ವ್ರತಧಾರಕನಾಗಿದ್ದನೆಂಬುದು ದಿಗಂಬರರ ಸಂಪ್ರದಾಯ. ತಪಸ್ವಿ ಜೀವನಕ್ಕೆ ಮೌನವ್ರತಧಾರಣೆಯು ದಿಗಂಬರರಿಗೂ ಆವಶ್ಯಕ ವಿಧಿಯಾಗಿಲ್ಲ. ಆದ್ದರಿಂದ (ಭ. ಮಹಾವೀರನ ಮೌನಧಾರಣೆಯ) ಈ ಕಲ್ಪನೆಯು ಅದೇ ಕಾಲದ ಶ್ವೇತಾಂಬರರ ಕಥನದ ಕೆಲವು ಘಟನಾವಳಿಗಳನ್ನು ಅಸತ್ಯವೆಂದು ಹೇಳುವ ಗುರಿಯ ಪಂಥಾಭಿಮಾನದ ತಂತ್ರವಾಗಿದೆಯೆಂದು ನಾವು ಭಾವಿಸುವುದು ನ್ಯಾಯಸಮ್ಮತವಾದುದಾಗಿಯೇ ಇದೆ.

ಮನ್ಯ ಪ್ರೊ. ಎಸ್. ಪದ್ಮನಾಭ ಜೈನಿಯವರ ಈ ಮೇಲಿನ ಹೇಳಿಕೆಗಳು ಅತ್ಯಂತ ವಿಸ್ಮಯಕಾರಿ ಮಾತ್ರವಲ್ಲ ಆಘಾತಕಾರಿಯೂ ಆಗಿವೆ. ಮೊದಲನೆಅಯದಾಗಿ– 'ದಿಗಂಬರ ಸಂಪ್ರದಾಯದವರು ಅಂಗ ಮತ್ತು ಅಂಗಬಾಹ್ಯ ಆಗಮ ಗ್ರಂಥಗಳು ಕ್ರಿ.ಶ.೨ನೇ ಶತಮಾನ ಕಾಲಕ್ಕಾಗಲೇ ಪೂರ್ಣರೀತಿಯಿಂದ ನಷ್ಟವಾದುವು (ಟೋಟಲಿ ಲಾಸ್ಟ್) ಎಂದು ನಂಬುತ್ತಾರೆ' ಎಂಬ ಇವರ ಹೇಳಿಕೆ ಶ್ವೇತಾಂಬರ ವಿದ್ವಾಂಸರ ಪ್ರತಿಧ್ವನಿಯಾಗಿದೆ. ಇವರಿಗೆ ಷಟ್ ಖಂಡಾಗಮ ಮತ್ತು ಕಸಾಯ ಪಾಹುಡ ಗ್ರಂಥಗಳ ಪರಿಚಯವಿಲ್ಲವೇನಂದಲ್ಲ. ಪುಷ್ಪದಂತ ಮತ್ತು ಭೂತಬಲಿ ಸ್ವಾಮಿಗಳೀರ್ವರಿಗೆ ಕಮ್ಮಪಯಡಿ ಶ್ರುತವನ್ನು ಉಪದೇಶಿಸಿದ ಧರಸೇನಾಚಾರ್ಯರವರೆಗೆ ಚತುರ್ದಶ ಪೂರ್ವ ಸಹಿತವಾದ ಅಂಗ–ಆಗಮ ಶ್ರುತವು ಏಕದೇಶರೀತಿಯಾಗಿ ಕಂಠಸ್ಥವಾಗಿ ಉಳಿದು ಬಂದಿದ್ದಿತೆಂಬುದರ ಐತಿಹ್ಯವನ್ನು ಧವಲಾ ಟೀಕೆಯಲ್ಲಿ ವೀರಸೇನ ಸ್ವಾಮಿಯವರು ಹೇಳಿದ್ದಾರೆ. ಈ ಬಗ್ಗೆ ಗೌತಮಗಣಧರರಾದಿಯಾಗಿ ಆಚಾರಾಂಗ ಶ್ರುತಪಾಠಿಗಳಲ್ಲಿ ಕೊನೆಯವರಾದ ಲೋಹಾಚಾರ್ಯರ ಪರ್ಯಂತದ ಅವಿಚ್ಛಿನ್ನ ಪರಂಪರೆಯನ್ನು ಇದರಲ್ಲಿ ನಿರೂಪಿಸಿದೆ. ಹೀಗಿರುವಲ್ಲಿ 'ಅಂಗ ಮತ್ತು ಅಂಗ ಬಾಹ್ಯ ಆಗಮ ಸಾಹಿತ್ಯವು ಪೂರ್ಣವಾಗಿ ನಷ್ಟವಾಯಿತು ಎಂದು ದಿಂಗಬರ ಸಂಪ್ರದಾಯದವರು ನಂಬುತ್ತಾರೆ' ಎಂಬುದಕ್ಕೆ ಆಧಾರವಾಧರೂ ಎಲ್ಲಿದೆ? ಧವಲಾದಲ್ಲಿ ಹೇಳಲಾಗಿರುವ ಗೌತಮ ಗಣಧರಾದಿ ಶ್ರುತಧರ

ಆಚಾರ್ಯಾನುಕ್ರಮ ಮತ್ತು ಆ ಅನುಕ್ರಮದಲ್ಲಿ ಏಕದೇಶರೀತಿಯಿಂದ ಉಳಿದು ಬಂದ ಶ್ರುತದ ಐತಿಹ್ಯ ಮಾನ್ಯ ಪ್ರೊಫೆಸರ್ ಜೈನಿ ಅವರ ದೃಷ್ಟಿಯಲ್ಲಿ ಪರಿಗಣನಾರ್ಹವಲ್ಲವೆ? ವಿಶ್ವಾಸಾರ್ಹವಲ್ಲವೆ? ಎಂಬ ಪ್ರಶ್ನೆಗಳು ಮೂಡುವುವು. ಶ್ವೇತಾಂಬರ ಸಾಹಿತ್ಯ ಸಂಬಂಧದ ಐತಿಹ್ಯವನ್ನು ವಿಮರ್ಶೆ ಇಲ್ಲದೆಯೇ ಸಾರಾಸಗಟಾಗಿ ಒಪ್ಪಿಕೊಳ್ಳುವ ಇವರು ಡಿಗಂಬರ ಸಂಪ್ರದಾಯದ ಐತಿಹ್ಯದ ಬಗ್ಗೆ ತಮ್ಮ ವಿಮರ್ಶಾಪೂರ್ಣ ಅಭಿಪ್ರಾಯವನ್ನಾದರೂ ತಿಳಿಸಬೇಕಾಗಿದ್ದಿತು. ಪಾಟಲೀಪುತ್ರ ನಗರದಲ್ಲಿ ಶ್ವೇತಾಂಬರರು ಕ್ರೋಡೀಕರಿಸಿದ ಆಗಮದ ಕೆಲವು ಭಾಗಗಳ ಬಗ್ಗೆ ಉಂಟಾದ ಅಸಮಾಧಾನದಿಂದ ದಿಗಂಬರರು ತಮ್ಮಲ್ಲಿ ಆಗಮವೆಂಬುದೇನೂ ಉಳಿದುಕೊಳ್ಳದಂತೆ ತ್ಯಜಿಸಿಬಿಟ್ಟಿದ್ದಾರೆ ಎಂಬುದು ಮಾನ್ಯ ಪ್ರೊಫೆಸರ್ ಜೈನಿ ಅವರ ತರ್ಕ. ಈ ಬಗ್ಗೆ ಒಂದೆರಡು ಪ್ರಶ್ನೆಗಳು ಉದ್ಭವಿಸುತ್ತವೆ. ದಿಗಂಬರ ಸಂಪ್ರದಾಯ ಯಾವಾಗ ಉದಯಕ್ಕೆ ಬಂದಿತು? ಮತ್ತು ಅದಾದ ಬಳಿಕ ಇವರು ಯಾವಾಗ ದಿಗಂಬರತ್ವಕ್ಕೆ ಒತ್ತು ಕೊಟ್ಟು ಶ್ವೇತಾಂಬರ ಸಂಪ್ರದಾಯದವರ ಪಾಟಲೀಪುತ್ರ ವಾಚನೆಯ ಆಗಮವನ್ನು ನಿರಾಕರಿಸಿದರು? ಈ ಪ್ರಶ್ನೆಗಳ ಬಗ್ಗೆ ವಿವರಣೆಯ ಅಗತ್ಯವಿದೆ.

'ದಿಗಂಬರರು ದಕ್ಷಿಣಕ್ಕೆ ವಲಸೆ ಹೋದ ಬಳಿಕ ತಮ್ಮಲ್ಲಿದ್ದಿರಬಹುದಾದ ಆಗಮವನ್ನು ಕಳೆದುಕೊಂಡಿರವ ಸಂಭವವಿದೆ' ಎಂದು ಮಾನ್ಯರು ಹೇಳಿದ್ದಾರೆ. ಇದರಂತೆ ದಕ್ಷಿಣಕ್ಕೆ ವಲಸೆ ಬರುವ ಮುನ್ನವೇ ದಿಗಂಬರ ಜೈನ ಮುನಿ ಸಂಘವು ದಕ್ಷಿಣಕ್ಕೆ ವಲಸೆ ಬಂದ ಐತಿಹಾಸಿಕ ಸಂಗತಿಯನ್ನು ಈ ಮಾನ್ಯರು ಒಪ್ಪುವರೆಂದಾಗುವುದು. ಉಪಲಬ್ಧವಿರುವ ಐತಿಹ್ಯದಂತೆ ಶ್ರುತಕೇವಲಿ ಭದ್ರಬಾಹುಸ್ವಾಮಿಯವರು, ಆಗ ಇದ್ದಂತಹ ಮಿನಿ ಸಂಘದಲ್ಲಿ ಅತ್ಯಧಿಕ ಪ್ರಮಾಣದ ಮಿನಿಗಣಗಳ ಸಹಿತ ದಕ್ಷಿಣಕ್ಕೆ ವಲಸೆ ಬಂದಿದ್ದಾರೆ. ಈ ಶ್ರುತಕೇವಲಿ ಭದ್ರಬಾಹು ಸ್ವಾಮಿಯವರ ಕಾಲದಲ್ಲಿ ಜೈನ ಮುನಿ ಸಂಘದಲ್ಲಿ ದಿಗಂಬರ ಮತ್ತು ಶ್ವೇತಾಂಬರ ಎಂಬ ಪಂಥ ಬೇದವೇ ಇರಲಿಲ್ಲ, ಆದ್ದರಿಂದ 'ದಿಗಂಬರರು ದಕ್ಷಿಣಕ್ಕೆ ವಲಸೆ ಬಂದರೆಂಬುದರ ಐತಿಹಾಸಿಕ ತಥ್ಯವೇನು? ಎಂಬುದು ಪ್ರಶ್ನೆಯಾಗುವುದು. ಇನ್ನು ಇದೇ ಐತಿಹ್ಯದಂತೆ 'ದಕ್ಷಿಣಕ್ಕೆ ಬಂದ ಮುನಿ ಸಂಘವು ಅತ್ಯಧಿಕ ಸಂಖ್ಯೆಯ ಮುನಿಗಳನ್ನೊಳಗೊಂಡಿದ್ದಿತೆಂಬುದಲ್ಲದೆ ಉತ್ತರದಲ್ಲಿ ಉಳಿದ ಮುನಿಗಳು ಅಲ್ಪಸಂಖ್ಯಾತರಾಗಿದ್ದರು' ಎಂಬ ಐತಿಹ್ಯದ ಸತ್ಯವನ್ನು ನಿರಾಕಿರಿಸುವಂತಿಲ್ಲ. ಆದ್ದರಿಂದ ಉತ್ತರದ

ಬಹುಸಂಖ್ಯಾತ ಮುನಿಗಳಿಂದ ಪ್ರತ್ಯೇಕತೆ ಹೊಂದಿದ ಕಾರಣದಿಂದ ದಿಗಂಬರರು ತಮ್ಮ ಆಗಮವನ್ನು ಕಳೆದುಕೊಂಡರೆಂಬ ತರ್ಕದ ಔಚಿತ್ಯ ತಿಳಿಯದಾಗುತ್ತದೆ. 'ಶ್ರುತಕೇವಲಿ ಭದ್ರಬಾಹು ಸ್ವಾಮಿಯವರ ಅನಂತರ ೧೮೩ ವರ್ಷಗಳ ಕಾಲ ದಶಪೂರ್ವಿಗಳು, ಆ ಬಳಿಕ ೨೨೦ ವರ್ಷಗಳ ಕಾಲ ಏಕಾದಶಾಂಗವನ್ನು ಪರಿಪೂರ್ಣ ವಾಗಿಯೂ ೧೨ನೇ ಅಂಗವನ್ನು ಏಕದೇಶರೀತಿಯಿಂದಲೂ ಸ್ಮೃತಿಯಲ್ಲಿ ಧಾರಣೆಮಾಡಿದ್ದ ಶ್ರುತಧರರು, ಮತ್ತು ಕೊನೆಯದಾಗಿ ಪರಿಪೂರ್ಣ ಆಚಾರಾಂಗ ಮತ್ತು ಇತರ ಎಲ್ಲ ಅಂಗಗಳನ್ನು ಏಕ ದೇಶ ರೀತಿಯಿಂದ ಧಾರಣೆ ಮಾಡಿದ್ದ ಆಚಾರಾಂಗ ಶ್ರುತಧರರು ೧೧೮ ವರ್ಷ ಕಾಲವೂ ಇದ್ದರು. ಈ ದಿಗಂಬರ ಪಂಥದ ಐತಿಹ್ಯ ಮಾನ್ಯ ಪ್ರೊಫೆಸರ್ ಜೈನಿ ಅವರ ದೃಷ್ಟಿಯಲ್ಲಿ ವಿಶ್ವಾಸಾರ್ಹವಲ್ಲವೆ? ದಿಗಂಬರ ಪಂಥದಲ್ಲಿ ಆಗಮ ನಷ್ಟವಾದ ಬಗ್ಗೆ ತಮ್ಮದೇ ಆದ ತರ್ಕವನ್ನು ಮಂಡಿಸಿರುವ ಮಾನ್ಯ ಪ್ರೊಫೆಸರ್ ಅವರು, ಈ ಹೇಳಿದ ದಿಗಂಬರ ಪಂಥದ ಶ್ರುತಧರ ಆಚಾರ್ಯಾನುಕ್ರಮದ ಐತಿಹ್ಯವನ್ನು ವಿವೇಚಿಸಿ ತಮ್ಮ ತರ್ಕವನ್ನು ಮಂಡಿಸಿದ್ದಲ್ಲಿ ಅದು ವಿಚಾರ ಪೂರ್ಣವೆನಿಸಿಕೊಳ್ಳಬಹುದಿದ್ದಿತು. ಮತ್ತೊಂದು ಮುಖ್ಯ ಸಂಗತಿ ಎಂದರೆ, ವೀ.ನಿ.ಸಂ. ೬೦೯ರಲ್ಲಿ ದಿಗಂಬರ ಪಂಥವು ಮೂಡಿತೆಂಬುದು ಶ್ವೇತಾಂಬರ ಪಂಥದ ಐತಿಹ್ಯ.

ಈ ರೀತಿಯಾಗಿ ಶ್ವೇತಾಂಬರ ಪಂಥದ ಐತಿಹ್ಯದಂತೆಯೇ ವೀ.ನಿ.ಸಂ. ೬೦೯ರವರೆಗೆ 'ದಿಗಂಬರ ಎಂಬ ಸ್ವತಂತ್ರ ಪಂಥವಿದ್ದಿರಲ್ಲಿವೆಂದಾಯಿತು. ಐತಿಹ್ಯವನ್ನು ಮಾನ್ಯರು ಒಪ್ಪುವರೆ? ಒಪ್ಪಿದಲ್ಲಿ ಈ ದಿಗಂಬರ ಪಂಥವು ದಕ್ಷಿಣಕ್ಕೆ ವಲಸೆ ಬಂದುದು ಯಾವಾಗ? ಹೀಗೆ ವಲಸೆ ಬಂದ ಇವರು ಉತ್ತರ ಭಾರತದಲ್ಲಿದ್ದ ಅಧಿಕ ಸಂಖ್ಯಾತ ಮುನಿಗಣದಿಂದ ಪ್ರತ್ಯೇಕತೆ ಹೊಂದಿ ತಮ್ಮ ಆಗಮವನ್ನು ಕಳೆದುಕೊಂಡದ್ದು ಯಾವಾಗ? ಈ ದಿಗಂಬರ ಪಂಥದ ಮುನಿಗಳು ಶ್ವೇತಾಂಬರ ಪಂಥದ ಆಗಮ ಕೃತಿಗಳ ಬಗ್ಗೆ ಎಲ್ಲಿಯಾದರೂ ಉಲ್ಲೇಖ ಮಾಡಿದ್ದಾರೆಯೆ, ಹಾಗೂ ಅವು ಪ್ರಾಮಾಣೀಕವಲ್ಲವೆಂದು ಹೇಳಿದ್ದಾರೆಯೆ? ಹೇಳಿದ್ದರೆ, ಎಲ್ಲಿ ಮತ್ತು ಯಾವಾಗ? ಎಂಬ ಪ್ರಶ್ನೆಗೆ ಈ ಮಾನ್ಯರ ಉತ್ತರ ಬೇಕಾಗಿದೆ.

ಮಾನ್ಯ ಪ್ರೊ.ಜೈನಿ ಅವರು ಪಾಟಲೀಪುತ್ರ ವಾಚನಾದ ಆಗಮವನ್ನು ದಿಗಂಬರರು ತಿರಸ್ಕರಿಸಿದರೆಂದು ಹೇಳಿದ್ದಾರೆ. ಈ ರೀತಿಯದಾದ ಪಾಟಲೀಪುತ್ರವಾಚನಾದ ಬಗ್ಗೆ ಮತ್ತು ಅದರ

ತಿರಸ್ಕಾರದ ಬಗ್ಗೆ ದಿಗಂಬರ ಪಂಥದ ಸಾಹಿತ್ಯದಲ್ಲಿ ಎಲ್ಲಿ ಉಲ್ಲೇಖ ವಿದೆ ಎಂಬುದು ತಿಳಿಯದಾಗಿದೆ. ಇಷ್ಟು ಮಾತ್ರವಲ್ಲ. ಈ ವಾಚನಾ ನಡೆದ ಬಗ್ಗೆ ಶ್ವೇತಾಂಬರ ವಿದ್ವಾಂಸರೇ ಸಂಶಯದ ಮಾತನ್ನು ಆಡಿದ್ದಾರೆ. ( ಮಾನ್ಯ ಹೆಚ್. ಆರ್. ಕಪಾಡಿಯ ಅವರ 'ದಿ ಕೆನಾನಿಕಲ್ಲಿಟರೇಚರ್ ಆಫ್ ದಿ ಜೈನಸ್' ಪು. ೬೨, ಅ.ಟಿ.ಳ) ಈ ವಾಚನಾದ ಐತಿಹ್ಯವು, ಪೂರ್ವಾಪರ ವಿರೋಧ ಸಂಗತಿಗಳನ್ನೊಳಗೊಂಡಿರುವುದರಿಂದ, ಕೇವಲ ಕಟ್ಟುಕ್ಥೆಯಾಗಿದೆ ಎಂದು ಇದೇ ಕೃತಿಯಲ್ಲಿ ಹಿಂದೆ ವಿವರಿಸಿದೆ. ಆದ್ದರಿಂದ ಪಾಟಲೀಪುತ್ರ ವಾಚನಾದ ಆಗಮವನ್ನು ದಿಗಂಬರರು ತಿರಸ್ಕರಿಸಿದರೆಂಬ ತರ್ಕ ಕೇವಲ ನಿರಾಧಾರವಾದುದು. ಶ್ವೇತಾಂಬರ ಆಗಮವನ್ನು ಭಗವಾನ್ ಮಹಾವೀರನ ನಿರ್ವಾಣದ ೯ನೇ ಶತಮಾನದಲ್ಲಿ ಸ್ಕಂದಿಲಸೂರಿಯವರು ಮತ್ತು ಇದೇ ಕಾಲದಲ್ಲಿ ನಗಾರ್ಜುನಸೂರಿಯವರು ಪುನರುದ್ಧರಣ ಮಾಡಿದರೆಂಬುದು ಮತ್ತು ಮುಂದೆ (ವಿ. ನಿ. ಸಂ.) ೧೦ನೇ ಶತಮಾನದಲ್ಲಿ ಆಗಮವನ್ನು ಪುಸ್ತಕಾರೂಢಮಾಡಲಾಯಿತೆಂಬುದು ಶ್ವೇತಾಂಬರ ಪಂಥದ ಐತಿಹ್ಯ.. ಹೀಗಿರುವಲ್ಲಿ ದಿಗಂಬರ ಪಂಥದವರು ವೀ. ನಿ. ೧೦ ನೇ ಶತಮಾನದ ಅನಂತರದಲ್ಲಿ ಶ್ವೇತಾಂಬರ ಆಗಮವನ್ನು ತಿರಸ್ಕರಿಸಿ ತಮ್ಮ ದಿಗಂಬರತ್ವಕ್ಕೆ ಒತ್ತುಕೊಟ್ಟರೆಂದು ಮಾನ್ಯ ಪ್ರೊಫೆಸರ್ ಜೈನಿ ಅವರ ಮಾತಿನ ಅರ್ಥವಾಗುವುದು. ಆದರೆ ಕ್ರಿ.ಶ. ೩ನೇ ಶತಮಾನ ಕಾಲಾನಂತರದಲ್ಲಿ ರಚಿತವಾಗಿರುವ ದಿಗಂಬರ ಪಂಥದ ತತ್ತ್ವ ಪ್ರರೂಪಣೆಯ ಸಾಹಿತ್ಯಕ್ಕೆ ಪುಷ್ಪದಂತ, ಭೂತಬಲಿ, ಗುಣಧರ, ಯತಿವೃಷಭಾ, ಕುಂದಕುಂದರೇ ಮೊದಲಾದ ಆಚಾರ್ಯರಿಂದ ವೀ.ನಿ.೭ನೇ ಮತ್ತು ೮ನೇ (ಕ್ರಿ.ಶ. ೨ ಮತ್ತು ೩ನೇ) ಶತಮಾನದಲ್ಲಿ ಆವಿರ್ಭಾವಗೊಂಡ ಆಧ್ಯಾತ್ಮಿಕ ಸಹಿತ್ಯ ಮೂಲಾಧಾರವಾಗಿದೆಯೆಂಬುದು ತಿಳಿದ ಸಂಗತಿ. ಅಲ್ಲದೆ. ಪುಷ್ಪದಂತರೇ ಮೊದಲಾದವರ ಸಾಹಿತ್ಯದ ರಚನೆಗೆ, ಶ್ರುತಧರಾಚಾರ್ಯಾನು ಕ್ರಮ ಐತಿಹ್ಯದಲ್ಲಿ ನಿರೂಪಿತವಿರುವಂತೆ, ದಿಗಂಬರ ಪಂಥದಲ್ಲಿ ಉಳಿದುಬಂದಿದ್ದ ಎಲ್ಲ ಅಂಗ ಮತ್ತು ಪೂರ್ವಶ್ರುತದ ಏಕದೇಶ ಜ್ಞಾನವೇ ಆಧಾರವಾಗಿದೆಯೆಂದು ಸ್ವತಃ ಪ್ರಮಾಣೀಕೃತವಾಘುವುದು. ಈ ದೃಷ್ಟಿಯಿಂದ ವಿವೇಚನೆ ಮಾಢುವಲ್ಲಿ ದಿಗಂಬರ ಪಂಥದವರು ಶ್ವೇತಾಂಬರ ಆಗಮವನ್ನು ತಿರಸ್ಕರಿಸಿದುದು ಯಾವಾಗ ಮತ್ತು ದಿಗಂಬರತ್ವಕ್ಕೆ ಒತ್ತು ಕೊಟ್ಟು ಆಗಮವನ್ನು ನಷ್ಟಪಡಿಸಿಕೊಂಡದ್ದು ಯಾವಾಗ ಎಂಬುದನ್ನು ಪರಿಷ್ಕಾರಪೂರ್ವಕ ಮಾನ್ಯ ಪ್ರೊ. ಜೈನಿ ಅವರು ಹೇಳಬೇಕಾದ ಅಗತ್ಯವಿದೆ.

ದಿಗಂಬರ ಸಂಪ್ರದಾಯದವರು ಆಗಮವನ್ನು ನಷ್ಟಪಡಿಸಿಕೊಂಡುದಕ್ಕೆ 'ದಿ ಜೈನ ಪಾತ್ ಆಫ್ ಪ್ಯೂರಿಫೀಕೇಶನ್' ನಲ್ಲಿ ಕೊಟ್ಟಿರುವ ಮತ್ತೊಂದು ಕಾರಣವನ್ನೂ ಇಲ್ಲಿ ವಿಮರ್ಶಿಸಬೇಕಾಗಿದೆ:

'ಭ. ಮಹಾವೀರನು ಕೇವಲಜ್ಞಾನ್ನ ಹೊಂದುವ ಮುಂಚೆ ತಪಸ್ವಿಯಾಗಿ ಸಾಧನೆ ನಡೆಸುತ್ತಿದ್ದ ಸಮಯದಲ್ಲಿ ಅವನೊಡನೆ ಗೋಶಾಲನು ಹೊಂದಿದ್ದ ಸಂಬಂಧವನ್ನು ಒಪ್ಪಿಕೊಳ್ಳಲಾರದಾದ ದಿಗಂಬರ ಸಂಪ್ರದಾಯದವರು, ಆ ಪ್ರಸಂಗವನ್ನೇ ಮರೆ ಮಾಡಲೋಸುಗ ಭ. ಮಹಾವೀರನಿಗೆ ಮೌನಧಾರಣೆ ಮಾಡಿಸಿದ್ದಾರೆ' ಎಂದು 'ದಿ ಜೈನ ಪಾತ್ ಆಫ್ ಪ್ಯೂರಿಫಿಕೇಶನ್' ನಲ್ಲಿ ಹೇಳಿದೆ. ಈ ಬಗ್ಗೆ ಆಲೋಚನಾರ್ಹವಾದ ಒಂದು ಸಂಗತಿ ಇದೆ. ದಿಗಂಬರ ಸಂರದಾಯದವರು ಭ. ಮಹಾವೀರನೊಬ್ಬನಿಗೆ ಈ ರೀತಿ ಮೌನಧಾರಣೆ ಮಾಡಿಸಿರುವರೆ? ಇಲ್ಲವೆ ಎಲ್ಲ ತೀರ್ಥಂಕರರಿಗೂ ಮೌನರ್ಧಾಣೆ ಮಾಡಿಸಿದ್ದಾರೆಯೆ? ಹಾಗೆ ಎಲ್ಲ ತೀರ್ಥಂಕರರಿಗೂ ಮೌನಧಾರಣೆ ಮಾಡಿಸಿದ್ದಾರೆಂಬುದು ನಿಜವಾದಲ್ಲಿ ಈ ಎಲ್ಲ ತೀರ್ಥಂಕರರೊಡನೆಯೂ ಒಅಬ್ಬೊಬ್ಬ ಗೋಶಾಲನ ಸಂಪರ್ಕವಿದ್ದಿತೆ? ಎಂಬ ಪ್ರಶ್ನೆಗೆ ಮಾನ್ಯ ಪ್ರೊ. ಜೈನಿ ಅವರೇ ಉತ್ತರ ಹೇಳಬೇಕು. ಪ್ರಸ್ತುತ ಸಂದರ್ಭದಲ್ಲಿ ವೃಷಭ ತೀರ್ಥಂಕರನ ದೀಕ್ಷಾಗ್ರಹಣ ಪ್ರಸಂಗದ ಕಥನದಲ್ಲಿ ಪೂಜ್ಯ ಶೀಲಾಂಕರು ತಮ್ಮ 'ಚ ಉಪ್ಪನ್ನ ಮಹಾ ಪುರಿಸ ಚರಿಯಂ' ನಲ್ಲಿ (ರಿಸಹಸಾಮಿ ಭರಹ ಚಕ್ಕವಟ್ಟಿ ಚರಿಯಂನಲ್ಲಿ) ಹೇಳಿರುವ ಮುಂದಿನ ಉಕ್ತಿಯನ್ನು ಗಮನಿಸಬೇಕಾಗಿದೆ: (ಪು.೪೦) "ಗಹಿಯ ಮೂಣವ್ವವೋ ಲಿಂಗಗ್ಗ ಹಣಕಾಲಮಾಸಾ ಇಯ ಮಣಜ್ಜವಣಾಣೋ ಚೌಣಾಣೀ. . ." ಇಲ್ಲಿ ದೀಕ್ಷಾಗ್ರಹಣ ಸಮಯದಲ್ಲಿ ಋಷಭಸ್ವಾಮಿಯು ಮೌನವ್ರತ ಧಾರಣೆ ಮಾಡಿದ ಸಂಗತಿ ಸ್ಪಷ್ಟವಿದೆ. ಪೂಜ್ಯ ಶೀಲಾಂಕರು ಶ್ವೇತಾಂಬರ ಪಂಥದ ಪ್ರಸಿದ್ಧ ಆಚಾರ್ಯರಲ್ಲೊಬ್ಬರು. ಇದರಂತೆ ತೀರ್ಥಂಕರರು ದೀಕ್ಷಾಗ್ರಹಣ ಮಾಢುವ ಸಮಯದಲ್ಲಿ ಮೌನವ್ರತ ಧಾರಣೆ ಮಾಡುವುದು ದಿಗಂಬರ ಸಂಪ್ರದಾಯದವರ ಸೃಷ್ಟಿ ಎಂದು ಹೇಳುವುದು ಕೇವಲ ಅಸಂಗತವಾದುದೆಂದು ಹೇಳಬೇಕಾಗುವುದು.

ಗೋಶಾಲನ ತೇಜೋಲೇಶ್ಯಾ ಪ್ರಯೋಗದಿಂದಾದ ವ್ಯಾಧಿಯ ಪರಿಹಾರಕ್ಕಾಗಿ ಶಿಷ್ಯರ ಒತ್ತಾಯದಿಂದ ಭ. ಮಹಾವೀರನು ತನ್ನ ಶಿಷ್ಯನ ಮೂಲಕ ತರಿಸಿಕೊಂಡ 'ಕುಕ್ಕುಟ ಮಂಸ'ವು ಕೋಳಿಯ ಮಾಂಸವಾಗಿರದೆ ಒಂದು ಔಷಧ ಸಸ್ಯವಾಗಿದೆ ಎಂದು ಹೇಳಿ ಮಾನ್ಯ ಪ್ರೊ. ಜೈನಿ ಅವರು

ಶ್ವೇತಾಂಬರ ಆಗಮದ ಕಲಂಕವನ್ನು ಪರಿಹರಿಸ ಲೆತ್ನಿಸಿದ್ದಾರೆ. ಆದರೆ, ಇದೇ ಆಚಾರಾಂಗ ಸೂತ್ರದ ಭಿಕ್ಷು, ಭಿಕ್ಷುಣಿಯರ ಮಾಂಸಾಹಾರದ ಬಗ್ಗೆ ಮಾನ್ಯ ಧರ್ಮಾನಂದ ಕೋಸಾಂಬಿಯವರಿಂದ ನಿರ್ದಿಷ್ಟವಾಗಿರುವಷ್ಟನ್ನಾದರೂ, ಅವೆಲ್ಲವೂ ಔಷಧಸಸ್ಯವರ್ಗವೆಂದೇ ಈ ಮಾನ್ಯರು ಪ್ರತಿಪಾದಿಸಿದ್ದಲ್ಲಿ ಕಲಂಕದ ಪರಿಹಾರ ಸಫಲವಾಗುತ್ತಿದ್ದಿತು.

ಮಾನ್ಯ ಪ್ರೊ. ಜೈನಿ ಅವರ ನಿರ್ಣಾಯಕ ಅಭಿಮತವೆನಿಸಿ ಹೇಳಿರುವ ಮತ್ತೂ ಒಂದು ಅಂಶವನ್ನು ಗಮನಿಸಬೇಕಾದ ಅಗತ್ಯವಿದೆ : (ಅವರ ಗ್ರಂಥ ಪು.೪೧) “ಈ (ದಿಗಂಬರ ಮತ್ತು ಶ್ವೇತಾಂಬರ) ಸಂಪ್ರದಾಯಗಳು ಯಾವ ಪ್ರಕಾರ ಮತಭೇದವುಳ್ಳವಾಗಿವೆ ಎಂಬುದನ್ನು (ಹಿಂದಿನ ವಿವರಣೆಗಳಿಂದ) ಕಂಡಿದ್ದೇವೆ: ಒಂದು (ದಿಗಂಬರ) ಸಂಪ್ರದಾಯವು ಅಧಿಕತರವಾಘಿ ಶ್ರದ್ಧೆ ಅಥವಾ ನಂಬಿಕೆಯನ್ನು ಆಧಾರವಾಗಿ ಹೊಂದಿರುವ ತತ್ತ್ವವುಳ್ಳದ್ದಾಗಿ ಹೆಚ್ಚಿನ ರೀತಿಯಿಂದ ಪೂರ್ವಾಚಾರಪ್ರಿಯ ಅಥವಾ ಸಂಪ್ರದಾಯ ಪಾಲಕವಾಗಿ (ಕನ್ಸರ್ವೇಟಿವ್) ಇದೆಯಾದರೆ, ಮತ್ತೊಂದು ( ಶ್ವೇತಾಂಬರ ಸಂಪ್ರದಾಯವು) ಸಂಕುಚಿತವಲ್ಲದ ಅಥವಾ ಕೇವಲ ಪದಶಃ ಅರ್ಥಮಾಡದಿರುವ ವೈಶಾಲ್ಯದ ಒಲವುಳ್ಳದೂ, ಸಡಿಲವಾದುದೂ, ವ್ಯವಹಾರಿಕವಾದುದೂ ಮತ್ತು ಸೈದ್ಧಾಂತಿಕ ಹಾಗೂ ಐತಿಹಾಸಿಕ ಆಧಾರಗಲತ್ತ ಅಭಿಮುಖವಾದುದೂ ಆಗಿದೆ”. ಎಂದು ಹೇಳಿದೆ.

ಶ್ವೇತಾಂಬರ ಸಂಪ್ರದಾಯದ ಬಗ್ಗೆ ಮಾನ್ಯ ಪ್ರೊ. ಜೈನಿ ಅವರು ಹೊಂದಿರುವ ನಿರ್ಣಾಯಕ ಅಭಿಮತದಂತೆ, ಈ ಸಂಪ್ರದಾಯವು ಎಷ್ಟು ದೂರ ವ್ಯಾವಹಾರಿಕ ವಾದುದಾಗಿ ಮತ್ತು ಐತಿಹಾಸಿಕ ಆಧಾರಗಳತ್ತ ಅಭಿಮುಖವಾಗಿದೆ ಎಂಬುದರ ಪಾರಿಚಿಂತನೆ ಮಾಡಲು ಆಚಾರಾಂಗ ಆಗಮದಲ್ಲಿ ಹೇಳಿರುವ ಈ ಮುಂದಿನ ಪ್ರಸಂಗವನ್ನು ಅವಧರಿಸಬೇಕಾಗಿದೆ.

“ಭ. ಮಹಾವೀರನು ಸ್ವರ್ಗದಿಂದ ಅವತರಣ ಮಾಡಿ ಕುಂಡಪುರದ ದಕ್ಷಿಣ ಭಾಗದಲ್ಲಿ ವಾಸಿಸುತ್ತಿದ್ದ ಋಷಭದತ್ತ ಬ್ರಾಹ್ಮಣನ ಮಡದಿ ದೇವಾನಂದೆ ಬ್ರಾಹ್ಮಣಿಯ ಗರ್ಭವನ್ನು ಸೇರಿದನು. ಆದರೆ (ಸ್ವರ್ಗದ) ಶಕ್ರನಿಗೆ ಇದು ಇಷ್ಟವಾಗಲಿಲ್ಲ. ಆದ್ದರಿಂದ ಆ ಗರ್ಭಸ್ಥ ಪಿಂಡವನ್ನು ಸಿದ್ಧಾರ್ಥರಾಜನ ಮಡದಿ ತ್ರಿಶಲೆಯ ಗರ್ಭಕ್ಕೆ ಸ್ಥಳಾಂತರಿಸಿದನು”.

ಆಧುನಿಕ ವಿದ್ವಾಂಸರಿಗೆ ಇದೊಂದು ಒಪ್ಪಲಾರದಂತಹ ವಿಚಿತ್ರ ಸಂಗತಿಯಾಗಿದೆ ಯಾದ್ದರಿಂದ ಬೇರೆಬೇರೆ ರೀತಿಯದಾದ ವಿವರಣೆ ಕೊಡಲು ಯತ್ನಿಸಿದ್ದಾರೆ. ಮಹಾವೀರನು ಸಿದ್ಧಾರ್ಥ ಮತ್ತು ತ್ರಿಶಲೆಯರ ದತ್ತುಪುತ್ರನಾಗಿರಬಹುದೆಂದು ಒಬ್ಬರ ಅಭಿಪ್ರಾಯವಾದರೆ, ದೇವಾನಂದೆ ಸಿದ್ಧಾರ್ಥನ ಹೆಂಡತಿಯೇ ಆಗಿರುವಳೆಂದು ಮತ್ತೊಬ್ಬರ ಅಭಿಪ್ರಾಯ. ಹೀಗೆಯೇ ದೇವಾನಂದೆಯು ಮಹಾವೀರನಿಗೆ ಹಾಲುಣಿಸಿದ ದತ್ತಕ ತಾಯಿಯಾಗಿರಬಹುದೆಂದು ಮತ್ತೊಬ್ಬರ ಅಭಿಪ್ರಾಯಪಟ್ಟೊದ್ದಾರೆ. ಇವೆಲ್ಲವೂ ಕಲ್ಪಿತ ಊಹೆಮಾತ್ರವಾಗಿವೆ ಎಂಬುದಂತೂ ಸತ್ಯ. ಆದರೆ ಆಗಮದ ಕಥಾಪ್ರಸಂಗ ಮಾತ್ರವನ್ನು ಗಣನೆಗೆ ತೆಗೆದುಕೊಂಡಲ್ಲಿ ಮಹಾವೀರನ ತಂದೆ ಋಷಭದತ್ತ ಬ್ರಾಹ್ಮಣನೋ? ಇಲ್ಲವೆ ಸಿದ್ಧಾರ್ಥರಾಜನೋ? ಎಂಬುದು ಮಾತ್ರ ಪ್ರಶ್ನೆಯಾಗಿಯೇ ಉಳಿದುಕೊಳ್ಳುತ್ತದೆ. ಈ ರೀತಿಯದಾದ ಭ. ಮಹಾವೀರನ ಜನನ ಪ್ರಸಂಗದ ಕಥನವು 'ಶ್ವೇತಾಂಬರ ಸಂಪ್ರದಾಯವು ವ್ಯವಹಾರಿಕವೂ, ಸೈದ್ಧಾಂತಿಕ ಹಾಗೂ ಐತಿಹಾಸಿಕ ಆಧಾರಗಳತ್ತ ಅಭಿಮುಖವಾದುದೂ ಆಗಿದೆ' ಎಂಬ ಮಾನ್ಯ ಪ್ರೊ. ಜೈನಿ ಅವರ ನಿರ್ಣಾಯಕ ಅಭಿಮತವನ್ನು ತೀವ್ರತರವಾಗಿ ಪ್ರಶ್ನಾಯತ್ತವಾಗಿ ಮಾಡುತ್ತದೆ.

ಇದುವರೆಗೆ ವಿವರಿಸಲಾದ 'ದಿ ಜೈನ ಪಾತ್ ಆಫ್ ಪ್ಯೂರಿಫಿಕೇಷನ್' ನಲ್ಲಿ ಕಂಡುಬರುವ ಸಂಗತಿಗಳಿಂದ ಮಾನ್ಯ ಪ್ರೊ. ಜೈನಿ ಅವರಿಗೆ ದಿಗಂಬರ ಪಂಥದ ಜೈನ ಸಿದ್ಧಾಂತದ ಕೆಲವಂಶಗಳಲ್ಲಿ ಮತ್ತು ವಿಶೇಷತಃ ಐತಿಹಾಸಿಕ ಸಂಗತಿಗಳಲ್ಲಿ ನಂಬಿಕೆ ಇಲ್ಲದಿರುವುದು ಸ್ಪಷ್ಟಗೊಂಡಿದೆ. ಇಷ್ಟಾದರೂ ಈ ಮಾನ್ಯರು ಷಟ್ ಖಂಡಾಗಮ ಮತ್ತು ಕಷಾಯ ಪಾಹುಡಗಳನ್ನು ದಿಗಂಬರ ಪಂಥದ ಆಗಮಗಳೆಂದೇ ಮಾನ್ಯ ಮಾಡಿರುವ ತಥ್ಯವನ್ನು ಇಲ್ಲಿ ಆದರಭಾವದೊಡನೆ ಕಾಣಲಾಗಿದೆ. "ದಿಗಂಬರ ಪಂಥದ ಈ ಕೃತಿಗಳು 'ಪವಿತ್ರ ಆಗಮ' ಎಂಬುದಾದ ಯಾವ ಅರ್ಥದಲ್ಲಿ ತಿಳಿಯಲಾಗುತ್ತಿತ್ತೋ ಆ ಆಗಮಗಳಾಗಿರದೆ, ಗುರುಗಳು ಉಪದೇಶಿಸಿದಾಗ ಶಿಷ್ಯರು ಪರಂಪರಾಗತವಾಗಿ ಉಳಿಸಿಕೊಂಡ ನೆನಪಿನ ಟಿಪ್ಪಣಿ– 'ಮೆಮೊರಿ ನೋಟ್ಸ್'ಗಳ ಆಧಾರದಿಂದ ರಚಿತವಾಗಿರುವ 'ಪ್ರಕರಣ' ( ಟ್ರೀಟೈಸಸ್)ಗಳಾಗಿವೆ" ಎಂದು ಮಾನ್ಯ ಆ. ನೇ ಉಪಾಧ್ಯೆ ಅವರು ಪ್ರರೂಪಣೆ ಮಾಡಿದ್ದಾರೆ. ( ಪ್ರವಚನಸಾರ, ಶ್ರೀಮದ್ರಾಜಚಂದ್ರ ಪ್ರಕಾಶನ –೧೯೬೪, ಪ್ರಸ್ತಾವನೆ,

ಪು೧೦೮) ಇವರ ಈ ಪ್ರರೂಪಣೆಯನ್ನು ಕುರಿತ ಪ್‌ರ್ಯಾಲೋಚನೆಯನ್ನು ‘ದಿಗಂಬರ ಜೈನ ಆಗಮಕೃತಿಗಳ ಭಾಷೆ’ಯಲ್ಲಿ ಕಾಣ ಬಹುದು ಇಂತಹ ಅಭಿಮತಗಳಿಗೆ ಶ್ವೇತಾಂಬರ ಪಂಥದ ಐತಿಹಾಸಿಕ ಹೇಳಿಕೆಗಳ ಬಗ್ಗೆ ವಿಮರ್ಶಾರಹಿತ ವಿಶ್ವಾಸ ಮತ್ತು ದಿಗಂಬರ ಪಂಥದ ಐತಿಹಾಸಿಕ ಸಂಗತಿಗಳ ಬಗ್ಗೆ ಅವಿಚಾರಿತ ಅವಿಶ್ವಾಸ ಕಾರಣಗಳಾಗಿವೆ ಎಂದು ಹೇಳಬಹುದು.